# " ವಾರ್ಡ್ ಕಮಿಟಿ ಸಭೆಯ ನಡವಳಿ"

ದಿನಾಂಕ: 05.01.2019 ರಂದು ಶನಿವಾರ ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ಬೆಳ್ಳಂದೂರು ಬಡಾವಣೆ ವಾರ್ಡ್ ಕಛೇರಿ, ಪಾಲಿಕೆ ಸದಸ್ಯರ ಕೊಠಡಿಯಲ್ಲಿ ವಾರ್ಡ್‌ಕಮಿಟಿಯ ಸಭೆಗೆ ಶ್ರೀಮತಿ.ಆಶಾ ಸುರೇಶ್ ರವರು ಅಧ್ಯಕ್ಷತೆ ವಹಿಸಿದ್ದು, ಸದರಿ ಸಭೆಯಲ್ಲಿ ಹಾಜರಿದ್ದ ಕಮಿಟಿಯ ಸದಸ್ಯರುಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು,

**ಸದಸ್ಯರುಗಳು**

1. ಶ್ರೀ. ಸುರೇಶ್
2. ಶ್ರೀ.ರಮೇಶ್
3. ಶ್ರೀಮತಿ.ವಿದ್ಯಾಭಟ್
4. ಶ್ರೀಮತಿ.ಕೌಶಲ್ಯ ಲಕ್ಕಿ
5. ಶ್ರೀಮತಿ.ಅಂಜಲಿ
6. ಶ್ರೀ. ಜ್ಯೋತಿ ರಂಜನ್
7. ಶ್ರೀ.ಅಂಬರೀಶ್ ನಾಯರ್
8. ಶ್ರೀ.ಮುರಳಿ
9. ಶ್ರೀ.ವೇಣುಗೋಪಾಲ್
10. ಶ್ರೀ.ವಸಂತ್‌ರೆಡ್ಡಿ

**ಅಧಿಕಾರಿಗಳು**

1. ಶ್ರೀ .ಎಚ್.ಪ್ರಕಾಶ್, (ಸಹಾಯಕ ಕಾರ್ಯಪಾಲಕ ಅಭಿಯಂತರರು) ಬೆಳ್ಳಂದೂರು.
2. ಶ್ರೀ.ವಿನಾಯಕ್ ವಾಸುದೇವ್ ನಾಯ್ಕ್, (ಸಹಾಯಕ ಅಭಿಯಂತರರು) ವಾರ್ಡ್ ನಂ.150 ಬೆಳ್ಳಂದೂರು.
3. ಶ್ರೀ.ಮಹೇಶ್ (ಆರೋಗ್ಯ ಪರಿವೀಕ್ಷಕರು) ವಾರ್ಡ್ ನಂ.150 (ಎ) ಮತ್ತು (ಬಿ). ಬೆಳ್ಳಂದೂರು.

ಈ ಮೇಲ್ಕಂಡ ಕಮಿಟಿಯ ಸದಸ್ಯರುಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿ ವರ್ಗದವರ ಸಮುಖದಲ್ಲಿ ಚರ್ಚಿಸಿದ ನಡವಳಿಕೆಗಳು.

1. **ಕಾಮಗಾರಿ ವಿಭಾಗ :**

ಸದಸ್ಯರಗಳ ಅಹವಾಲಿನ ಪ್ರಸ್ತಾವನೆಯನ್ನು ಅಧ್ಯಕ್ಷರು ಸಭೆಯಲ್ಲಿ ಈ ಕೆಳಕಂಡಂತೆ ಮಂಡಿಸಿರುತ್ತಾರೆ.

1. ಅನಧೀಕೃತ ಓವರ್‌ಹೆಡ್ ಕೇಬಲ್ ಹಾಕಿದವರ ವಿರುದ್ಧ FIR ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.
2. ಎಸ್.ಟಿ.ಪಿ ನೀರನ್ನು ಎಸ್.ಡ್ಲ್ಯೂ.ಡಿಗೆ ಬಿಡುವ ಅಪಾರ್ಟ್‌ಮೆಂಟ್ ಮತ್ತು ವಾಣಿಜ್ಯ ಸಂಕೀರ್ಣಗಳಿಗೆ ನೋಟೀಸ್ ನೀಡುವುದು.
3. ಫುಟ್‌ಪಾತ್ ಮೇಲೆ ಹಾಗೂ ಖಾಲಿ ನಿವೇಶನಗಳಲ್ಲಿ ತಳ್ಳುವ ಗಾಡಿ ಮುಂಗಟ್ಟುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುವವರ ಮೇಲೆ FIR ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

Scanned by CamScanner

4. ಹರಳೂರು ರಸ್ತೆಯಲ್ಲಿರುವ ಸ್ಟೀಲ್ ಅಂಗಡಿಗೆ ಪಿ.ಓ ಮತ್ತು ಸಿ.ಓ ನೋಟೀಸ್ ನೀಡುವ ಬಗ್ಗೆ ಕ್ರಮ ಕೈಗೊಳ್ಳುವುದು.

5. ಶಾಲೆಯ ಹತ್ತಿರದಲ್ಲಿರುವ ದೂಮಪಾನದ ಅಂಗಡಿಗಳನ್ನು ತೆರೆವುಗೊಳಿಸುವುದು.

6. ಜಯರಾಮ ರೆಡ್ಡಿ ಲೇಔಟ್‌ನಲ್ಲಿ ಸ್ಯಾನಿಟರಿ ಕಂಪ್ಲೇಟ್ ಬಗ್ಗೆ ಕ್ರಮ ಕೈಗೊಳ್ಳುವುದು.

7. ರಸ್ತೆ ಮೂಲಭೂತ ಸೌಕರ್ಯ ಪ್ರಾಧಿಕಾರಕ್ಕೆ ಕೆಲವು ಪ್ರದೇಶದ ರಸ್ತೆಗಳ ಬಗ್ಗೆ ಕ್ರಮ ವಹಿಸಲು ಪತ್ರ ಬರೆಯುವುದು.

8. BWSSB ರವರು ಕಾವೇರಿ ಪೈಪ್‌ಲೈನ್ ಕೆಲಸ ನಿರ್ವಹಿಸಿರುವುದರಿಂದ ರಸ್ತೆಗಳು ಹಾಳಾಗಿದ್ದು, ಆದಷ್ಟು ಬೇಗ ಸರಿಪಡಿಸುವ ಬಗ್ಗೆ ಕ್ರಮ ವಹಿಸುವುದು.

9. ಕೇಬಲ್‌ಗಳಿಗೆ ವಿಶೇಷವಾದ ಶಾಸ್ವತ ಕಂದಕಗಳನ್ನು ಮಾಡುವ ಬಗ್ಗೆ.

10. ಗ್ರೀನ್‌ಗ್ಲೇನ್ ಲೇಔಟ್ ನಲ್ಲಿ ಕೆಲ ರಸ್ತೆಗಳಲ್ಲಿ ಸ್ಪೀಡ್‌ಬ್ರೇಕ್ ಅಳವಡಿಸುವ ಬಗ್ಗೆ ಕ್ರಮ ವಹಿಸುವುದು.

11. ಕೈಕೊಂಡ್ರಹಳ್ಳಿಯಲ್ಲಿರುವ ಪಿ.ಜಿ ಗಳಿಗೆ ನೀರು ಸರಬರಾಜು ಲೈನ್ನನ್ನು ಕಟಾವು ಮಾಡುವ ಬಗ್ಗೆ ಕ್ರಮ ವಹಿಸುವುದು.

12. ಸರ್ಜಾಪುರ ರಸ್ತೆಯ **Roof Waidning** ಕಾರ್ಯವನ್ನು ಕ್ಷಿಪ್ರ ಗತಿಯಲ್ಲಿ ಕೈಗೊಳ್ಳುವ ಬಗ್ಗೆ.

13. ಗ್ರೀನ್‌ಗ್ಲೇನ್ ಲೇಔಟ್‌ನ ಬಚ್ಚನ್ ಬಿಲ್ಡಿಂಗ್ ಎದುರಿನ ಪುಟ್‌ಪಾತ್ ತೆರೆವುಕಾರ್ಯಚರಣೆಯನ್ನು ಕೈಗೊಂಡಿರುವ ಬಗ್ಗೆ.

14. ರಸ್ತೆ ಮೂಲಭೂತ ಸೌಕರ್ಯ ಪ್ರಾಧಿಕಾರಕ್ಕೆ ಟ್ರಾಫಿಕ್ ಸಮಸ್ಯೆಯ ಬಗ್ಗೆ ಚರ್ಚಿಸಲಾಗಿದ್ದು, ಕ್ರಮ ವಹಿಸುವ ಬಗ್ಗೆ ಗಮನಹರಿಸುವುದು.

15. ಹರಳೂರು ಮತ್ತು ಸರ್ಜಾಪುರ ರಸ್ತೆಯ ಜಂಕ್ಷನಲ್ಲಿ **U Turn** (ಯು ಟರ್ನ್) ಕಲ್ಪಿಸುವ ಬಗ್ಗೆ.

**2. ಘನತ್ಯಾಜ್ಯ ವಿಭಾಗ:**

ಸದಸ್ಯರಗಳ ಅಹವಾಲಿನ ಪ್ರಸ್ತಾವನೆಯನ್ನು ಅಧ್ಯಕ್ಷರು ಸಭೆಯಲ್ಲಿ ಈ ಕೆಳಕಂಡಂತೆ ಮಂಡಿಸಿರುತ್ತಾರೆ.

1. ತ್ಯಾಜ್ಯ ನಿರ್ವಹಣೆಯನ್ನು ನಿರ್ವಹಿಸುವ ಪೌರಕಾರ್ಮಿಕರಿಗೆ ಸಾಧನ-ಸಲಕರಣೆಗಳನ್ನು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

2. ಕಸದ ವರ್ಗಾವಣೆ (ಗಾರ್ಬೇಜ್ ಟ್ರಾನ್ಸ್‌ಫರ್‌ಗೆ) ಸ್ಥಳಗಳನ್ನು ಒದಗಿಸಿಕೊಡುವ ಬಗ್ಗೆ. ಕ್ರಮ ಕೈಗೊಳ್ಳುವುದು.

3. ಪೌರಕಾರ್ಮಿಕರುಗಳನ್ನು ಡಿಸಿಲ್ಟಿಂಗ್ ಕೆಲಸ ಕಾರ್ಯಗಳಿಗೆ ನಿಯೋಜಿಸಿಕೊಳ್ಳುವ ಬಗ್ಗೆ.

5/1/19

ಕಾರ್ಯದರ್ಶಿಗಳು
ವಾರ್ಡ್ ನಂ. 150 ಬೆಳ್ಳಂದೂರು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಾರತ್‌ಹಳ್ಳಿ ಉಪ ವಿಭಾಗ
ಮಹದೇವಪುರ ವಲಯ, ಬೆಂಗಳೂರು-37

ಅಧ್ಯಕ್ಷರು
ವಾರ್ಡ್ ನಂ. 150 ಬೆಳ್ಳಂದೂರು.

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಸಂಖ್ಯೆ:..................
ದಿನಾಂಕ:..................
ಮಾರತ್‌ಹಳ್ಳಿ ಉಪ ವಿಭಾಗ ಬೆಂಗಳೂರು-37

Scanned by CamScanner